ಸಿ. ಸಿ. ನಂ. **153/2017**

ಪಿ ಡಬ್ಲ್ಯೂ: **1**

**ಸಾಕ್ಷಿಯು ದಿನಾಂಕಃ 01-08-2024 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ಅವರಿಂದ**

ಪಂಚನಾಮೆಯನ್ನು ದಿಃ 25-09-2016 ರಂದು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಮುಂಭಾಗದ ಸೋನಿ ಹಲ್ಲಿನ ಆಸ್ಪತ್ರೆಯಲ್ಲಿ ಮಧ್ಯಾಹ್ನ 01-00 ರಿಂದ 02-00 ಗಂಟೆ ಸಮಯದಲ್ಲಿ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಪಂಚರಾದ ಚಾಸಾ -2 ಮತ್ತು 3 ರವರು ಹಾಜರಿದ್ದರು. ತನಿಖಾಧಿಕಾರಿ ಚಾಸಾ -10 ರವರು ಹಾಜರು ಇದ್ದರು. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 2 ಎಂದು ಸಾಕ್ಷಿಯ ಸಹಿಯನ್ನು ನಿಪಿಃ 2 (ಎ) ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಪೋಟೋದಲ್ಲಿನ ವ್ಯಕ್ತಿ ನಾನೇ. ಸಾಕ್ಷಿ 2- ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿಃ 3 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸ ಸ ಅ ರವರು ದಿಃ 21-08-2023 ರ ಅರ್ಜಿಯ ಅಡಿಯಲ್ಲಿ ಸಲ್ಲಿಸಲಾದ ದಾಖಲೆಗಳನ್ನು ಅಭಿಯೋಜನೆ ಪರವಾಗಿ ಗುರುತಿಸಲು ಕೋರಿದ್ದು, ಆರೋಪಿ ಪರ ವಕೀಲರು ಸದರಿ ಅರ್ಜಿಯ ಮೇಲೆ ಯಾವುದೇ ಆದೇಶ ಆಗಿರುವುದಿಲ್ಲ ಮತ್ತು ಆರೋಪಿ ಅದಕ್ಕೆ ತಕರಾರನ್ನು ಸಹ ಹಾಕುವುದು ಬಾಕಿ ಇರುತ್ತದೆ ಎಂದು ಸದರಿ ದಾಖಲೆಗಳನ್ನು ಗುರುತಿಸಲು, ತಕರಾರನ್ನು ಸಲ್ಲಿಸಿರುತ್ತಾರೆ.**

ಸಿ. ಸಿ. ನಂ. **153/2017**

ಪಿ ಡಬ್ಲ್ಯೂ: **1**

**ಆದ್ದರಿಂದ, ಉಭಯ ಪಕ್ಷಗಾರರನ್ನು ಆಲಿಸಿ ಸಾಕ್ಷ್ಯದಲ್ಲಿ ಗುರುತಿಸಲು ಬರುತ್ತದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸಿ ಮುಂದುವರೆಯುವುದು ಅವಶ್ಯಕ ಎಂದು ಕಂಡು ಬಂದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.